ಶ್ರೀ ಸಿ. ಆರ್. ರಂಗೇಗೌಡ.—ನರ್ಕಾರಕ್ಕೆ ಅರ್ಜಿ ಕೊಟ್ಟ ಮೇಲೆ ಸರ್ಕಾರದವರು ಅದನ್ನು ತಾಲ್ಲೂಕು ಮಟ್ಟಕ್ಕೆ ಕಳುಹಿಸಿದ್ದು, ಸ್ವಳದ ರೆವೆನ್ಯೂ ಇನ್‌ಸ್ಪೆಕ್ಟರು ರಿಕಾರ್ಡ್ ಬಿಲ್ಡ್ ಅಪ್ ಮಾಡಿ ತಹಸೀರ್ದಾರರಿಗೆ ಕಳುಹಿಸಿಕೊಟ್ಟಿರುವುದು ಪೆಂಡಿಂಗ್‌ನಲ್ಲಿದೆ. ಅವುಗಳನ್ನು ಜಾಗ್ರತೆ ಮಂಜೂರು ಮಾಡಿಸಿಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ವಿಚಾರಿಸುತ್ತೇನೆ, ಸಭ್ಯಮಿ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಕೊರಚ, ಕೊರಮ ಮತ್ತು ಹರಿಜನರು 1965 ನೇ ಇಸವಿಯಲ್ಲಿಯೇ ದರಖಾಸ್ತು ಅರ್ಜಿಗಳನ್ನು ಹಾಕಿಕೊಂಡಿರತಕ್ಕುದು ಇವೆ. ಇದಕ್ಕೆ ಸಂಬಂಧಪಟ್ಟಂತೆ ಪಂಚಾಯಿತಿಯವರು ರೆಸಲ್ಯೂಷನ್ ಮಾಡದೆ ಇರುವುದರಿಂದ ಜಮೀನು ಬಡವರಿಗೆ ಮಂಜೂರಾಗದೇ ಹಾಗೆಯೇ ನಿಂತಿದೆ. ಪಂಚಾಯಿತಿ ರೆಸಲ್ಯೂಷನ್ ಇಲ್ಲದೆ ಜಮೀನು ಕೊಡುವ ವ್ಯವಸ್ಥೆಯನ್ನು ಮಾಡುತ್ತೀರಾ, ಸ್ವಾಮಿ ?

ಶ್ರೀ ಬಿ. ರಾಚಯ್ಯ.—ಪಂಚಾಯತಿಯವರ ರೆಸಲ್ಯೂಷನ್ ಇಲ್ಲದೆ, ಅವರ ಒಪ್ಪಿಗೆ ಇಲ್ಲದ ಈಗ ಕೊಡುವುದಕ್ಕೆ ಅವಕಾಶವಿದೆ.

ಶ್ರೀ ಸಿ. ಆರ್. ರಂಗೇಗೌಡ.—ಗವಿನಾಗಮಂಗಲ ಗ್ರಾಮದಲ್ಲಿ ಹೆಚ್ಚು ಆಹಾರ ಬೆಳೆಯತಕ್ಕ ಯೋಜನೆಯಲ್ಲಿ ಜಮೀನು ಸಾಗುವಳಿ ಮಾಡುತ್ತಿದ್ದು 10-15 ವರ್ಷಗಳಿಂದಲೂ ಟಿ.ಟಿ. ಕಟ್ಟಿಕೊಂಡು ಬಂದಿದ್ದಾರೆ. ಅವರು ಅದಕ್ಕೆ ಸಂಬಂಧಪಟ್ಟ ಕಂಡೀಷನ್‌ಗಳನ್ನು ಫುಲ್‌ಫಿಲ್ ಮಾಡಿದ್ದಾರೆ. ಆದ್ದರಿಂದ ಜಾಗ್ರತೆಯಾಗಿ ಜಮೀನುಗಳನ್ನು ಅವರಿಗೆ ಖಾಯಂ ಮಾಡಿಸಿಕೊಡುವುದಕ್ಕೆ ಅವಕಾಶ ಮಾಡುತ್ತೀರಾ ಸ್ವಾಮಿ ?

ಶ್ರೀ ಬಿ. ರಾಚಯ್ಯ.—ಹೆಚ್ಚು ಆಹಾರ ಬೆಳೆಯತಕ್ಕ ಯೋಜನೆಯ ಮೇಲೆ ಜಮೀನನ್ನು ಕೊಟ್ಟಿರುವವರಿಗೆ ನಿಯಮಾವಳಿಗಳನ್ನೆಲ್ಲ ಅವರು ಸಂಪೂರ್ಣವಾಗಿ ನೆರವೇರಿಸಿದ್ದರೆ ಅವರಿಗೆ ಕೊಡುವುದಕ್ಕೆ ಬೇಗ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ದರಖಾಸ್ತು ಕೊಟ್ಟರೆ ಅದನ್ನು ಇಷ್ಟೇ ದಿವಸಗಳಲ್ಲಿ ತೀರ್ಮಾನಮಾಡಬೇಕೆಂದು ಆದೇಶ ಕೊಟ್ಟಿದ್ದೀರಾ ?

ಶ್ರೀ ಬಿ. ರಾಚಯ್ಯ.—ದೇಶದಲ್ಲಿರುವ ಜನರೆಲ್ಲಾ ಒಂದಲ್ಲ ಒಂದು ರೂಪದಲ್ಲಿ ಭೂಮಿಯನ್ನು ಕೇಳುತ್ತಿದ್ದಾರೆ. ಹೆಚ್ಚು ಜನರು ಕೇಳುವುದರಿಂದ ಜಾಗ್ರತೆ ಇತ್ಯರ್ಥಮಾಡುವುದಕ್ಕಾಗುತ್ತಿಲ್ಲ. ಅರ್ಜಿ ಕೊಟ್ಟಮೇಲೆ ಇಷ್ಟು ದಿವಸಗಳಲ್ಲಿ ತೀರ್ಮಾನಮಾಡಬೇಕೆಂದು ನಿಯಮವಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—(ಬಿ) ಪ್ರಶ್ನೆಗೆ ಉತ್ತರವಾಗಿ ಎರಡನೆಯ ಭಾಗದಲ್ಲಿ ಪಹಣಿ ಎಕ್ಸ್‌ಟ್ರಾಕ್ಟ್ ಬೇಕಾಗಿರುವುದರಿಂದ ನಿಧಾನವಾಗಿದೆ ಎಂದು ತಿಳಿಸಿದೆ. ಅದನ್ನು ಒದಗಿಸಬೇಕಾದರೆ ಜನರಿಗೆ ಹತ್ತಾರು ರೂಪಾಯಿ ಖರ್ಚುಮಾಡಬೇಕಾಗಿ ತೊಂದರೆಯಾಗುವುದರಿಂದ ಮತ್ತು ಅದು ಸರಕಾರದಲ್ಲೇ ಇರುವುದರಿಂದ ಸರಕಾರವೇ ಅದನ್ನು ತರಿಸಿಕೊಂಡು ಇತ್ಯರ್ಥಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಬಿ. ರಾಚಯ್ಯ.—ಅದನ್ನು ವಿಚಾರಮಾಡುತ್ತೇನೆ.

Primary Consumers Co-operative Stores, Ltd.

398. **Sri T. V. KRISHNAPPA** (Channapatna).—

Will the Minister for Development and Co-operation be pleased to state :—

(*a*) whether they are aware of the transactions of Primary Consumers Co-operative Stores, Ltd., in respect of Foodgrains lifted from Taluk Agriculture Produce Co-operative Marketing Society, Ltd., Ramanagaram ;

(*b*) whether they are aware that the abovementioned stores are collecting excess over the rates fixed by Government in wholesale transactions ;

(*c*) if so, the action taken by them against the concerned persons ;

(*d*) if not, whether they will institute an enquiry against the abovementioned persons after the abovementioned allegations are established ?

A.—Sri P. M. NADGOUDA (Minister for Development and Co-operation).—

(*a*) Yes.

(*b*) Yes.

(*c*) and (*d*) The matter is being enquired into.

ಶ್ರೀ ಟಿ. ಎ. ಕೃಷ್ಣಪ್ಪ.—ಹೆಚ್ಚಿಗೆ ದರ ವಸೂಲಿ ಮಾಡುವುದಕ್ಕೆ ಕಾರಣವೇನು ?

† ಶ್ರೀ ಪಿ. ಎಂ. ನಾಡಗೌಡ.—ಎಜುಕೇಷನಲ್ ಇನ್‌ಸ್ಟಿಟ್ಯೂಷನ್‌ಗೋಸ್ಕರ ಡೊನೇಷನ್ ಎಂದು ತೆಗೆದುಕೊಂಡಿದ್ದಾರೆ.

Sri SIDDIAH KASIMATH.—May I know the excess amount collected by this Society ?

ಶ್ರೀ ಪಿ. ಎಂ. ನಾಡಗೌಡ.—6,594 ರೂಪಾಯಿ ಬಿಲ್ಲರೆಯಾಗುತ್ತದೆ.

ಶ್ರೀ ಎಚ್. ಬಿ. ಹ್ಯಾಲನಯ್ಯ.—ಹಾಗಾದರೆ ಹಾಗೆ ಹೆಚ್ಚಿಗೆ ತೆಗೆದುಕೊಳ್ಳುವುದಕ್ಕೆ ಅನುಮತಿ ಯಿದೆಯೆಂದು ಭಾವಿಸಬಹುದೇ ?

ಶ್ರೀ ಪಿ. ಎಂ. ನಾಡಗೌಡ.—ಅನುಮತಿ ಕೊಟ್ಟಿಲ್ಲ, ಜಿಲ್ಲಾಧಿಕಾರಿಗಳಿಗೆ ಈಗಾಗಲೆ ವಿಚಾರ ತಿಳಿಸಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಈ ಕೋ-ಆಪರೇಟಿವ್ ಸ್ಟೋರ್ಸ್‌ನವರು ಈಗಾಗಲೇ ಸುಮಾರು ಒಂದೂವರೆ ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ವಸೂಲುಮಾಡಿದ್ದಾರೆಂದು ಹೇಳುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಆ ರೀತಿ ದೂರು ಬಂದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಹೆಚ್ಚಿಗೆ ದರ ತೆಗೆದುಕೊಂಡಿರುವುದರ ಬಗ್ಗೆ ಯಾರು ಎನ್‌ಕ್ವೈರಿ ಮಾಡುತ್ತಿದ್ದಾರೆ ?

ಶ್ರೀ ಪಿ. ಎಂ. ನಾಡಗೌಡ.—ಡೆಪ್ಯುಟಿ ಕಮಿಷನರು.

ಶ್ರೀ ಎಚ್. ಸಿದ್ದವೀರಪ್ಪ.—ಈ ಸೊಸೈಟಿ ಅಧ್ಯಕ್ಷರು ಯಾರು ?

ಶ್ರೀ ಪಿ. ಎಂ. ನಾಡಗೌಡ.—ಆ ಬಗ್ಗೆ ಮಾಹಿತಿ ಈಗ ನನ್ನಲ್ಲಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಅದರ ಅಧ್ಯಕ್ಷರು ಕಾಂಗ್ರೆಸ್ ಎಂ. ಎಲ್. ಸಿ. ಎಂಬುದು ಗೊತ್ತಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಇಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಒಂದು ಕ್ವಿಂಟಾಲಿಗೆ 40 ರೂಪಾಯಿಗಳಿಂದ 50 ರೂಪಾಯಿ ಗಳವರೆಗೆ ಜಾಸ್ತಿ ವಸೂಲು ಮಾಡುತ್ತಿದ್ದಾರೆ. ಅದನ್ನು ಕನ್‌ಸ್ಯೂಮರ್ ಮೇಲೆ ಹಾಕುತ್ತಿದ್ದಾರೆ. ರಾಮ ಪ್ರದೇಶದಲ್ಲಿ ಈ ಒಂದು ಸೊಸೈಟಿಯಲ್ಲಿ 10 ರಿಂದ 45 ರೂಪಾಯಿಗಳವರೆಗೆ ಒಂದು ಕ್ವಿಂಟಾಲಿಗೆ ಹೆಚ್ಚಾಗಿ ವಸೂಲುಮಾಡಿ ಅದನ್ನು ಉಪಯೋಗಿಸುವವರಮೇಲೆ ಹಾಕಿದ್ದಾರೆ ಎಂದು ಹೇಳುವಾಗ ಅದು ಗೊತ್ತಿಲ್ಲವೆಂದು ಹೇಳಿದರೆ ಹೇಗೆ ?

†Indicates that the remarks or speeches have not been revised by the member concerned

ಶ್ರೀ ಪಿ. ಎಂ. ನಾಡಗೌಡ.—ಮಾನ್ಯ ಸದಸ್ಯರು ಉತ್ಪ್ರೇಕ್ಷೆಮಾಡಿ ಹೇಳುತ್ತಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಉತ್ಪ್ರೇಕ್ಷೆಯಿಲ್ಲ. ಬೇಕಾದರೆ ಎವರವನ್ನು ಸಭೆಯಮುಂದೆ ಇಡುತ್ತೇನೆ. ವೆರಿಫೈಮಾಡಿ ನೋಡಬಹುದು.

ಶ್ರೀ ಪಿ. ಎಂ. ನಾಡಗೌಡ.—ನನ್ನ ಹತ್ತಿರ ಇರುವ ಅಫಿಷಿಯರ್ ಇನ್‌ಫರ್ಮೇಷನ್ ಪ್ರಕಾರ ಬ್ಯಾನ್‌ಗೆ ಡೆಪ್ಯುಟಿ ಕಮಿಷನರು 37 ರೂಪಾಯಿ ಫಿಕ್ಸ್ ಮಾಡಿದ್ದಾರೆ, ಅದಕ್ಕೆ 38 ರೂಪಾಯಿ ತೆಗೆದುಕೊಂಡಿದ್ದಾರೆ, ಗಾಂ ಡಾರ್‌ಗೆ 158 ರೂಪಾಯಿ ಬೆರೆ ಗೊತ್ತುಮಾಡಿದೆ, ಅದಕ್ಕೆ 162 ರೂಪಾಯಿ ತೆಗೆದುಕೊಂಡಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ತಾರೀಖು 23-3-1967 ರಲ್ಲಿ ಕೊಟ್ಟಿರುವ ಬಿರ್ ನಂಬರು 4870 ನನ್ನ ಬಳಿ ಇದೆ. ಮೈಲೋ 2 ಸಾವಿರ ಕೆ. ಜಿ. ಯನ್ನು ಕಂಟ್ರೋಲು ದರಕ್ಕಿಂತ ಹೆಚ್ಚು ದರದಲ್ಲಿ ಮಾರಿದ್ದಾರೆ, 47 ರೂಪಾಯಿ ಹಾಸ್ತಿ ವಸೂಲುಮಾಡಿದ್ದಾರೆ.

ಶ್ರೀ ಪಿ. ಎಂ. ನಾಡಗೌಡ.—ಇಲ್ಲಿಕೊಟ್ಟ ಪ್ರಕಾರ ಮೈಲೋ ಒಂದು ಕ್ವಿಂಟಾಲ್‌ಗೆ 48 ರೂಪಾಯಿ ಇದೆ, 48 ರೂಪಾಯಿ ತೆಗೆದುಕೊಂಡಿದ್ದಾರೆ, ಅದಕ್ಕಿಂತ ಹೆಚ್ಚು ತೆಗೆದುಕೊಂಡಿಲ್ಲ.

ಶ್ರೀ ಬಿ. ದೊಡ್ಡಬೋರೇಗೌಡ.—ಕರಾ ಮುಂದಿರಗಳಿಗೆ ಮತ್ತು ನೃತ್ಯ ಮುಂದಿರಗಳಿಗೆ ಇದೆ ರೀತಿ ಅನೇಕ ಸಹಕಾರ ಸಂಘಗಳಲ್ಲಿ ಹಣ ವಸೂಲು ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಪಿ. ಎಂ. ನಾಡಗೌಡ.—ಅಂತಹ ನಿದರ್ಶನ ತಂದು ಕೊಟ್ಟರೆ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬಹುದು.

ಶ್ರೀ ಎಚ್. ಬಿ. ಜ್ವಾಲನಯ್ಯ.—ಹೆಚ್ಚುವರಿ ಹಣವನ್ನು ಬಿರ್‌ನಲ್ಲಿ ತೋರಿಸದೆ ಅದನ್ನು ನೇರವಾಗಿ ಆ ಸಂಘಕ್ಕೆ ಡೋನೇಷನ್ ಆಗಿ ಕೊಡುವಂತೆ ಒತ್ತಾಯ ಮಾಡುವುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಪಿ. ಎಂ. ನಾಡಗೌಡ.—ಹಾಗೇನೂ ಬಂದಿಲ್ಲ. ಯಾರು ಇವತ್ತಿನ ದಿವಸ ಹೆಚ್ಚು ಕೊಟ್ಟಿದ್ದಾರೆ. ಅವರು ಯಾರೂ ತಕರಾರು ಮಾಡಿಲ್ಲ, ತಕರಾರು ಮಾಡಿದರೆ ಕೊಡಿಸಲಕ್ಕೆ ಪ್ರಯತ್ನ ಮಾಡಬಹುದು.

ಶ್ರೀ ಎಂ. ರಾಮಣ್ಣ.—ಈಗ 6,594 ರೂಪಾಯಿ ಡೊನೇಷನ್ ಕಲೆಕ್ಟ್ ಮಾಡಿರುವುದಕ್ಕೆ ರಸೀದಿ ಕೊಟ್ಟಿಲ್ಲವೆ?

ಶ್ರೀ ಪಿ. ಎಂ. ನಾಡಗೌಡ.—ಕೊಟ್ಟಿರಬಹುದು ಅಂತ ಅನಿಸುತ್ತದೆ. 6 ಸಾವಿರ ರೂಪಾಯಿ ಕಲೆಕ್ಟ್ ಆಗಿದೆ ಎಂದು ರೆಕಾರ್ಡ್ ಆಗಿದೆ ಎಂದಮೇಲೆ ರಸೀದಿ ಕೊಟ್ಟಿರಬೇಕು, ಬೇಕಾದರೆ ವಿಚಾರಿಸಿ ಹೇಳುತ್ತೇನೆ.

Branches of Visweshwaraiah Channel

399. Sri T. P. BORAIAH (Bannur).—

Will the Minister for Public Works be pleased to state :—

(*a*) the names of Visweshwariah channel branches and sub-branches;

(*b*) the extent of atchkat comes under each of the above channels;

(*c*) the quantum of water allowed in each of the above channels;

(*b*) for how many days in a year water is allowed to each of the above channels?